ಸಾಕ್ಷಿಗೆ ದಿನಾಂಕಃ **19.09.2024** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀಸವಾಲು ಃ ಪ್ರತಿವಾದಿಗಳ ಪರಃ ಮಾನ್ಯ ಎಜಿಪಿ ಯವರಿಂದ ಃ</u>

ದಾವಾ ಆಸ್ತಿಗೆ ನಾನು ಹೋಗಿ ಭೇಟಿ ನೀಡಿ ಪರಿಶೀಲನೆ ನಡೆಸಿರುವುದಿಲ್ಲ. ಹರಾವರಿ ಗ್ರಾಮದ ಸರ್ವೆ ನಂಃ 155 ರಲ್ಲಿ ಒಟ್ಟು ವಿಸ್ತೀರ್ಣ 408.20 ಎಕರೆ ಇದ್ದು, ಅದರಲ್ಲಿ 191.10 ಎಕರೆ ಅರಣ್ಯ ಪ್ರದೇಶಕ್ಕೆ ಮೀಸಲು ಇರುತ್ತದೆ. ಈಗ ನೋಡುತ್ತಿರುವ ಆರ್ ಟಿ ಸಿ ಯು ಮೇಗರಮಕ್ಕಿ ಮೀಸಲು ಅರಣ್ಯ ಪ್ರದೇಶಕ್ಕೆ ಸಂಬಂಧಿಸಿ 191.10 ಎಕರೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಡಿ-16 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿ ಜಂಟಿ ಸರ್ವೆ ಆಗಿರುವ ಸಂಬಂಧ ನನಗೆ ಮಾಹಿತಿ ಇರುವುದಿಲ್ಲ. ಈಗ ನೋಡುತ್ತಿರುವ ದಾಖಲೆ ಪ್ರಕಾರ ಕ್ರಮ ಸಂಃ 3 ರಲ್ಲಿ ತೋರಿಸಿರುವ ಹಸಿರು ಬಣ್ಣದಲ್ಲಿ ತೋರಿಸಿದಂತೆ ಮೇಗರಮಕ್ಕಿ ಮೀಸಲು ಅರಣ್ಯ ಪ್ರದೇಶದ ಗಡಿ ರೇಖೆಗಳು ಎಂದರೆ ಸಾಕ್ಷಿಯು ಆ ರೀತಿ ನಮ್ಮ ಕಚೇರಿಯ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ಮಧ್ಯಭಾಗದಲ್ಲಿ ಮೇಗರಮಕ್ಕಿ ಗಡಿ ಭಾಗವು ಹಾದುಹೋಗಿರುವ ಸಂಬಂಧ ಈಗ ತೋರಿಸಿರುವ ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ತಹಶೀಲ್ದಾರ್ ಆಗಿರುವುದರಿಂದ ಎಲ್ಲಾ ದಾಖಲೆಗಳು ನನ್ನ ಸಂರಕ್ಷಣೆಯಲ್ಲಿ ಇರುವುದಾಗಿದ್ದರೂ ಈಗ ನಾವು ತೋರಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇದ್ದರೂ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

**(ದಿನಾಂಕಃ 19.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**ಪ್ರ.ದ.ನ್ಯಾದಂಃ ನ.ರಾ.ಪುರ.**

ಸಾಕ್ಷಿ ಸಹಿಃ